ಶ್ರೀ ಆರ್.ಎಲ್. ಜಾಲಪ್ಪ:- ಈ ಸದನ ಮುಗಿಯವುದರೊಳಗಾಗಿ ಎಲ್ಲಾ ತಾಲ್ಲೂಕಿನಲ್ಲಿ ಭೂ ನ್ಯಾಯಮಂಡಲಿಯನ್ನು ರಚಿಸುತ್ತೇವೆ.

ಡಾ. ಎಂ.ಪಿ. ಕರ್ಕಿ: ಹೊನ್ನಾವರ ಕುಮುಟಾ ತಾಲ್ಲೂಕುಗಳಲ್ಲಿ ಅನೇಕ ಪ್ರಕರಣಗಳು ವಿಚಾರಣೆಗೆ ಬರುವ ಮೊದಲೇ ಖಾಲಿಯಾಗಿವೆ. ಇದರ ಬಗ್ಗೆ ತಾವು ಮಾಡತಕ್ಕಂತಹ ಕ್ರಮ ಏನು? ಭೂ ನ್ಯಾಯ ಮಂಡಲಿಯನ್ನು ಸದನ ಮುಗಿಯುವುದರೊಳಗೆ ಮಾಡುತ್ತೇವೆಂದು ಹೇಳಿದರು. ಇದರ ಸದಸ್ಯರು ಯಾರ್ಯಾರು ಅವರ ಹೆಸರನ್ನು ಹೇಳುವುದು ಬೇಡವೇ? ಆದರೆ ಯಾವ್ಯಾವ ವರ್ಗಕ್ಕೆ ಸೇರಿದಂತಹ ಜನರನ್ನು ಇದರಲ್ಲಿ ಸೇರಿಸುತ್ತೀರಿ ಎನ್ನುವುದನ್ನು ಮಾನ್ಯ ಮಂತ್ರಿಗಳು ಹೇಳುತ್ತಾರೆಯೇ?

ಶ್ರೀ ಆರ್.ಎಲ್.ಜಾಲಪ್ಪ:- ಒಬ್ಬರು ಹಿಂದುಳಿದವರು ಇರುತ್ತಾರೆ, ಒಬ್ಬರು ಪರಿಶಿಷ್ಟ ಜಾತಿಯವರಿರುತ್ತಾರೆ ಸಾಧ್ಯವಾದರೆ ಒಬ್ಬ ಮಹಿಳೆಯನ್ನು ಸೇರಿಸಬೇಕೆಂದಿದ್ದೇವೆ. ಇನ್ನೊಬ್ಬರು ಜನರಲ್ ಆಗಿ ಇರುತ್ತಾರೆ.

ಡಾ. ಎಂ.ಪಿ. ಕರ್ಕಿ: ಸಾಧ್ಯವಾದರೆ ಎಂದು ಹೇಳುವುದು...

ಅಧ್ಯಕ್ಷರು:- ಇನ್ನೂ ಗೈಡಲೈನ್ಸ್ ನಿರ್ಣಯ ಮಾಡಿಲ್ಲ. ಗೈಡಲೈನ್ಸ್ ಡಿಸೈಡ್ ಮಾಡಿ ಈ ಸದನ ಮುಗಿಯುವುದರೊಳಗೆ ಮಾಡುತ್ತಾರೆ.

ಶ್ರೀ ಅರಗ ಜ್ಞಾನೇಂದ್ರ:- ಟ್ರಿಬ್ಯುನಲ್ಲಿನಲ್ಲಿ ಈಗಾಗಲೇ ಜಡ್ಜಮೆಂಟ್ ಆಗಿದೆ. ಆದರೆ ಸರ್ವೇಯರ್ ಇಲ್ಲದ್ದರಿಂದ ಅಳತೆಗೆ ಒಳಪಡಿಸಿ ತೀರ್ಪನ್ನು ನೀಡಲಾಗಿದೆ. ಆದರೆ ಅಳತೆ ಇರುವುದು ಒಂದು, ಪಹಣಿಯಲ್ಲಿರುವುದು ಒಂದು. ಈ ರೀತಿಯಾಗಿ ಜಡ್ಜಮೆಂಟ್ ಸಂಪೂರ್ಣವಾಗಲಿಲ್ಲ. ನನ್ನ ಕ್ಷೇತ್ರದಲ್ಲಿ 11 ಸಾವಿರ ಅರ್ಜಿಗಳು ಬಾಕಿ ಇವೆ. ಇದನ್ನು ಸೆಟಲ್‌ಮೆಂಟ್ ಮಾಡಲಿಕ್ಕೇನು ಕ್ರಮ ತೆಗೆದುಕೊಳ್ಳುತ್ತೀರಿ? 74 ರಿಂದ ಇದುವರೆಗೆ ಇದು ಮುಗಿದಿಲ್ಲ. ಇದನ್ನು ಯಾವಾಗ ಮುಗಿಸುತ್ತೀರಿ.?

ಶ್ರೀ ಆರ್. ಎಲ್. ಜಾಲಪ್ಪ:- ಎಷ್ಟು ಜಮೀನು ಮಾಡುತ್ತಿದ್ದಾರೆ ಅಷ್ಟು ಮಾಡಿಕೊಂಡೇ ಇದ್ದಾರೆ. ರೆಗ್ಯುಲರ್ ಸರ್ವೇಯಾಗಬೇಕೆಂದು ಹೇಳುತ್ತಿದ್ದಾರೆ. 1300 ಜನ ಸರ್ವೇಯರ್ಸ್‌ಗಳು ಕಡಿಮೆ ಇದ್ದಾರೆಂದು ನಾನು ಈಗಾಗಲೇ ಹೇಳಿದ್ದೇನೆ ಸಾಧ್ಯವಾದಷ್ಟು ಬೇಗ ಅವರನ್ನು ರೆಕ್ರೂಟ್ ಮಾಡಿ ಇದನ್ನು ಇಂಪ್ಲೀಟ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ರಾಜ್ಯದಲ್ಲಿ ಬರಗಾಲ ಪರಿಸ್ಥಿತಿಗೆ ಕೈಗೊಂಡ ಕ್ರಮಗಳು

1343-ಶ್ರೀ ಪಿ. ಮುನಿಯಪ್ಪ (ಶಿಡ್ಲಘಟ್ಟ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯವು ಬರಗಾಲ ಪರಿಸ್ಥಿತಿಯನ್ನು ಎದುರಿಸುತ್ತಿದೆಯೇ? ಹಾಗಿದ್ದಲ್ಲಿ ತೀವ್ರವಾಗಿ ಬರಗಾಲವನ್ನು ಎದುರಿಸುತ್ತಿರುವ ಜಿಲ್ಲೆಗಳಾವುವು?

ಆ) ಈ ಬರಗಾಲವನ್ನು ಎದುರಿಸಲು ಸರ್ಕಾರದವರು ಹಾಕಿಕೊಂಡಿರುವ ಪರಿಹಾರ

ಇ) ಇವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುವುದೇ?

ಈ) ಕೋಲಾರ ಜಿಲ್ಲೆಯಲ್ಲಿ ಯಾವ ವಿಶೇಷ ಕಾರ್ಯಕ್ರಮಗಳಡಿಯಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗದೆ?

ಉ) ಈ ಜಿಲ್ಲೆಗೆ ಒದಗಿಸಲಾಗಿರುವ ಒಟ್ಟು ಮೊಬಲಗಷ್ಟು?

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಸಚಿವರು):

ಅ) 17 ಜಿಲ್ಲೆಗಳಲ್ಲಿನ 70 ತಾಲ್ಲೂಕುಗಳಲ್ಲಿ ಮಳೆಯ ಕೊರತೆ ಕಂಡು ಬಂದಿದೆ.

ಆ) ಅವಶ್ಯವಿರುವೆಡೆಗಳಲ್ಲಿ ಕುಡಿಯುವ ನೀರು, ಮೇವು ಹಾಗೂ ಅವಶ್ಯವಿರುವ ಕೃಷಿ ಕೂಲಿಕಾರರು ಮತ್ತು ಸಣ್ಣ ಅತಿ ಸಣ್ಣ ರೈತರುಗಳಿಗೆ ಉದ್ಯೋಗವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಇ) ಹೌದು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ ಇಲಾಖೆಯ, ಚಾಲ್ತಿಯಲ್ಲಿರುವ ಕಾಮಗಾರಿಗಳಾದ ಕುಡಿಯುವ ನೀರಿನ ಸರಬರಾಜು, ಜವಾಹರ್ ರೋಜಗಾರ್ ಯೋಜನೆ ಮತ್ತು ಅಡಿಷನಲ್ ಜವಾಹರ್ ಯೋಜನೆಗಳ ಜೊತೆಗೆ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಕುಡಿಯುವ ನೀರು ಮತ್ತು ಮೇವಿನ ಪೂರೈಕೆಗಾಗಿ ಹೆಚ್ಚುವರಿ ಅನುದಾನವನ್ನು ಒದಗಿಸಲಾಗಿದೆ.

ವಿವರಗಳು ಈ ಕೆಳಕಂಡಂತಿವೆ:

1.	ಕುಡಿಯುವ ನೀರಿನ ಪೂರೈಕೆಗೆ	ರೂ. 258.20 ಲಕ್ಷ
2.	ಉದ್ಯೋಗ ಸೃಜನೆಗೆ	ರೂ. 1392.67 ಲಕ್ಷ
3.	ಮೇವಿನ ಪೂರೈಕೆಗೆ	ರೂ. 5.00 ಲಕ್ಷ
	ಒಟ್ಟು	**ರೂ. 1655.87 ಲಕ್ಷ**

ಶ್ರೀ ವಿ. ಮುನಿಯಪ್ಪ: "ರಾಜ್ಯವು ಬರಗಾಲ ಪರಿಸ್ಥಿತಿಯನ್ನು ಎದುರಿಸುತ್ತಿದೆಯೇ" ಎಂದು ಕೇಳಿದ್ದಕ್ಕೆ ಅದಕ್ಕೆ ನಿರ್ದಿಷ್ಟವಾದ ಉತ್ತರ ಇಲ್ಲ. ಹಾಗಿದ್ದಲ್ಲಿ ತೀವ್ರವಾಗಿ ಬರಗಾಲವನ್ನುಎದುರಿಸುತ್ತಿರುವ ಜಿಲ್ಲೆಗಳಾವುವು ಎಂದು ಕೇಳಿದ್ದಕ್ಕೆ 17 ಜಿಲ್ಲೆಗಳಲ್ಲಿನ 70 ತಾಲ್ಲೂಕುಗಳಲ್ಲಿ ಮಳೆಯ ಕೊರತೆ ಕಂಡು ಬಂದಿದೆ ಎಂದು ತಿಳಿಸಿದ್ದಾರೆ. ಯಾವ್ಯಾವ ಜಿಲ್ಲೆ ಎಂದು ನಾನು ಕೇಳಿದರೆ 70 ತಾಲ್ಲೂಕುಗಳಲ್ಲಿ ಮಳೆಯ ಕೊರತೆ ಕಂಡು ಬಂದಿದೆ ಎಂದು ಹೇಳುತ್ತಾರೆ.

ಅನಂತರ ಈ ಬರಗಾಲವನ್ನು ಎದುರಿಸಲು ಸರಕಾರ ಮಾಡಿಕೊಂಡಿರುವ ಪರಿಹಾರ ಕಾಮಗಾರಿಗಳು ಯಾವುವು ಎಂದು ಕೇಳಿದ್ದಕ್ಕೆ ಅವಶ್ಯವಿರುವೆಡೆಗಳಲ್ಲಿ ಕುಡಿಯುವ ನೀರು, ಮೇವು ಹಾಗೂ ಅವಶ್ಯವಿರುವ ಕೃಷಿ ಕೂಲಿಕಾರರು ಮತ್ತು ಸಣ್ಣ ಅತಿ ಸಣ್ಣ ರೈತರುಗಳಿಗೆ ಉದ್ಯೋಗವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ. ಇದರ ಬಗ್ಗೆ ಕೂಡ ಸಮರ್ಪಕವಾಗಿ ಉತ್ತರ

ಉದ್ಯೋಗ ಒದಗಿಸುತ್ತೇವೆಂದು ಹೇಳಿದ್ದಾರೆ. ಅದು ಸರಿಯಾದಂಥ ಉತ್ತರ ಅಲ್ಲ. ಕೋಲಾರ ಜಿಲ್ಲೆಯ ಯಾವ ವಿಶೇಷ ಕಾರ್ಯಕ್ರಮಗಳ ಅಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ ಎಂದು ಕೇಳಿದ್ದಕ್ಕೆ ಅವು ಕುಡಿಯುವ ನೀರಿನ ಯೋಜನೆ, ಜವಾಹರ್ ರೋಜಗಾರ್ ಯೋಜನೆ ಮತ್ತು ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಕುಡಿಯುವ ನೀರು ಮತ್ತು ಮೇವಿನ ಪೂರೈಕೆಗಾಗಿ ಹೆಚ್ಚು ಅನುದಾನ ಒದಗಿಸಿದ್ದೇವೆಂದು ತಿಳಿಸಿದ್ದಾರೆ. ಇವುಗಳೆಲ್ಲಾ ಪ್ರತಿ ವರ್ಷ ನಡೆಯತಕ್ಕಂತಹ ಕಾರ್ಯಕ್ರಮಗಳು. ವಿಶೇಷವಾಗಿ ಬರಗಾಲದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕೋಲಾರ ಜಿಲ್ಲೆಗೆ ಎಷ್ಟು ಹಣ ಬಿಡುಗಡೆಯಾಗಿದೆ ಎಂಬ ಬಗ್ಗೆ ನಿರ್ದಿಷ್ಟವಾಗಿ ಹೇಳಿಲ್ಲ ಅದನ್ನು ಹೇಳಬೇಕು. ಕುಡಿಯುವ ನೀರಿಗೆ ಎಷ್ಟು ಹಣವನ್ನು ಬರಗಾಲದ ಅಡಿಯಲ್ಲಿ ಬಿಡುಗಡೆ ಮಾಡಿದ್ದಾರೆಂಬುದನ್ನು ನಿರ್ದಿಷ್ಟವಾಗಿ ಉತ್ತರದಲ್ಲಿ ಹೇಳಿಲ್ಲ. ಕೋಲಾರ ಜಿಲ್ಲೆಗೆ ಕುಡಿಯುವ ನೀರಿನ ಯೋಜನೆಗೆ ಬಲಗಾಲ ಪರಿಹಾರ ನಿಧಿಯಿಂದ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಎಂಬುದನ್ನು ನಿರ್ದಿಷ್ಟವಾಗಿ ಹೇಳಬೇಕು. ಕುಡಿಯುವ ನೀರಿಗೆ 258 ಲಕ್ಷವೆಂದು ನಿಗದಿ ಮಾಡಿದ್ದೀರಿ. ಇದು ವರ್ಷದ ಆ್ಯಕ್ಷನ್ ಪ್ಲಾನ್. ನಮ್ಮ ಜಿಲ್ಲೆಗೆ ಕೊಟ್ಟಿರತಕ್ಕಂಥಾದ್ದು ಇದು ತಮಗೂ ಗೊತ್ತಿದೆ. ಇದನ್ನು ಬರಗಾಲಪರಿಸ್ಥಿತಿಗೆಂದು ಬಿಡುಗಡೆ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು:- ಅವರು ಮಾಡಿಕೊಂಡು ಹೋಗಲಿ. ಮಾನ್ಯ ಮುನಿಯಪ್ಪನವರೇ, ತಾವು ಮಂತ್ರಿಯಾಗಿ ಕೆಲಸ ಮಾಡಿದ್ದೀರಿ 3ನೇ ಸಲ ಗೆದ್ದು ಬಂದಿದ್ದೀರಿ. ಪ್ರಶ್ನೋತ್ತರ ವೇಳೆಯಲ್ಲಿ ಭಾಷಣ ಮಾಡುತ್ತಾ ನಿಂತಿದ್ದೀರಿ. ಕಿರಿಯ ಸದಸ್ಯರುಗಳಿಗೆ ನಾನು ಏನು ಹೇಳಬೇಕು. ನಾನು 11-15ಕ್ಕೆ ಮುಗಿಸುತ್ತೇನೆ ನೀವು ಹೇಗೆ ಬೇಕಾದರೂ ಮಾಡಿಕೊಳ್ಳಿ.

ಶ್ರೀ ವಿ. ಮುನಿಯಪ್ಪ:- ಆಭಾವ ಪರಿಹಾರ ನಿಧಿಯಿಂದ ನಿರ್ದಿಷ್ಟವಾಗಿ ಆ ಯೋಜನೆ ಅಡಿಯಲ್ಲಿ ಎಷ್ಟು ಹಣವನ್ನು ಕುಡಿಯುವ ನೀರಿಗೆ ಬಿಡುಗಡೆ ಮಾಡಿದ್ದೀರಿ ಎಂಬ ಬಗ್ಗೆ ಸರಿಯಾಗಿ ಉತ್ತರ ಹೇಳಬೇಕು. ಅಭಾವ ಪರಿಹಾರ ಕಾಮಗಾರಿಗಳಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಯಾವ್ಯಾವ ಕೆಲಸಗಳನ್ನು ಕೈಗೆತ್ತಿಕೊಂಡಿದ್ದೀರಿ.

ಶ್ರೀ ಆರ್.ಎಲ್. ಜಾಲಪ್ಪ:- ಅವರು ಕೇಳಿರುವ ಪ್ರಶ್ನೆಗೆ ಕರಾರು ಲೆಕ್ಕದ ಉತ್ತರ ಒದಗಿಸಿದ್ದೇನೆ.

ಶ್ರೀ ವಿ. ಮುನಿಯಪ್ಪ: ನನ್ನ ಆ ಪ್ರಶ್ನೆಗೆ ನಿರ್ದಿಷ್ಟವಾದ ಉತ್ತರ ಸಿಗಲಿಲ್ಲ. ರಾಜ್ಯವು ಬರಗಾಲ ಪರಿಸ್ಥಿತಿಯನ್ನು ಎದುರಿಸುತ್ತಿದೆಯೇ ಎಂದು ಕೇಳಿದ್ದಕ್ಕೆ 17 ಜಿಲ್ಲೆಗಳಲ್ಲಿ 70 ತಾಲ್ಲೂಕುಗಳಲ್ಲಿ ಮಳೆಯ ಕೊರತೆ ಕಂಡು ಬಂದಿದೆಎಂದು ಹೇಳುತ್ತಾರೆ. ಯಾವ್ಯಾವ ಜಿಲ್ಲೆ ಎಂದು ಕೇಳಿದ್ದಕ್ಕೆ ನಿರ್ದಿಷ್ಟವಾದ ಉತ್ತರ ಇಲ್ಲ.

ಶ್ರೀ ಆರ್.ಎಲ್.ಜಾಲಪ್ಪ: ಅವರು ಕೇಳಿರುವ ಪ್ರಶ್ನೆ 'ರಾಜ್ಯವು ಬರಗಾಲ ಪರಿಸ್ಥಿತಿಯನ್ನು ಎದುರಿಸುತ್ತಿದೆಯೇ? ಹಾಗಿದ್ದಲ್ಲಿ ತೀವ್ರವಾಗಿ ಬರಗಾಲವನ್ನು ಎದುರಿಸುತ್ತಿರುವ ಜಿಲ್ಲೆಗಳಾವುವು' ಎಂದು ಕೇಳಿದ್ದಾರೆ. ನಾವು ಹೇಳಿದ್ದೇವೆ. 17 ಜಿಲ್ಲೆಗಳಲ್ಲಿನ 70 ತಾಲ್ಲೂಕುಗಳಲ್ಲಿ ಈ ಒಂದು ಬರಗಾಲ ಇದೆ ಎಂದು ಹೇಳಿದ್ದೇವೆ. ಅವರು ಹೆಸರುಗಳನ್ನು ಕೊಡಿ ಎಂದು ಹೇಳಿದ್ದಾರೆ. ಅದನ್ನು ಬೇಕಾದರೆ

ಕಳುಹಿಸಿಕೊಡುತ್ತೇನೆ. ಮುಂದಿನ ಪ್ರಶ್ನೆ ಅವರು ಕೇಳಿರುವುದು ಎಂದರೆ 'ಈ ಬರಗಾಲವನ್ನು ಎದುರಿಸಲು ಸರ್ಕಾರದವರು ಹಾಕಿಕೊಂಡಿರುವ ಪರಿಹಾರ ಕಾಮಗಾರಿಗಳು ಯಾವುವು' ಎಂದಿದ್ದಾರೆ. ಅದಕ್ಕೆ ಉತ್ತರವಾಗಿ 'ಅವಶ್ಯವಿರುವೆಡೆಗಳಲ್ಲಿ ಕುಡಿಯುವ ನೀರು, ಮೇವು ಹಾಗೂ ಅವಶ್ಯವಿರುವ ಕೃಷಿ ಕೂಲಿಕಾರರು ಮತ್ತು ಸಣ್ಣ : ಅತಿಸಣ್ಣ ರೈತರುಗಳಿಗೆ ಉದ್ಯೋಗವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ ಎಂದಿದ್ದೇವೆ. ಇದಕ್ಕೇನು ಹೇಳಬೇಕು. ಯಾವ ರೀತಿಯ ಉತ್ತರವನ್ನು ಹೇಳಬೇಕು?

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಈಗ ತಾವು 17 ಜಿಲ್ಲೆಗಳಲ್ಲಿನ 70 ತಾಲ್ಲೂಕುಗಳಲ್ಲಿ ಮಾತ್ರ ಮಳೆ ಕೊರತೆ ಇದೆ ಎಂದು ಹೇಳಿದ್ದೀರಿ. ಸನ್ಮಾನ್ಯ ನಾಣಯ್ಯನವರು, ಕೊಡಗು ಜಿಲ್ಲೆಯಲ್ಲಿ ಭತ್ತ ನಾಟಿಯಾಗಿಲ್ಲ ಎಂದು ಹೇಳಿ ಹೇಳಿದರು. ಮಳೆಯಾಗಿಲ್ಲ. ಅದಕ್ಕೋಸ್ಕರ ಈಗಿರುವಂಥ ವಾಸ್ತವ ಸ್ಥಿತಿಯನ್ನು ಎಷ್ಟು ತಾಲ್ಲೂಕುಗಳಲ್ಲಿ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮೊದಲು ಅವರಿಗೆ ಉತ್ತರವನ್ನು ಹೇಳಿ. ನ್ಯಾಚುರಲ್ ಕೆಲಾಮಿಟಿಯಲ್ಲಿ ಫಂಡ್ ಎಷ್ಟು ಇಟ್ಟಿದ್ದೀರಿ ಎಂದು ಹೇಳಿ. ಅದಕ್ಕೆ ಮೊದಲು ಹೇಳಿ. ನಂತರ ಅವರ ಸಪ್ಲಿಮೆಂಟರಿಗೂ ಉತ್ತರವನ್ನು ಕೊಡಿ.

ಶ್ರೀ ಆರ್.ಎಲ್. ಜಾಲಪ್ಪ: ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ವಿವರವಿದೆ ನಾನು ಆ ವಿವರಗಳನ್ನೆಲ್ಲ ಕೊಡುತ್ತೇನೆ. ಸಧ್ಯಕ್ಕೆ ಇಷ್ಟೇ ಉತ್ತರ ಸಾಕುಎಂದು ಹೇಳಿ ಅಂದುಕೊಂಡಿದ್ದೇನೆ. ಮಿಕ್ಕ ವಿವರಗಳನ್ನು ನಾನು ಒದಗಿಸಿಕೊಡುತ್ತೇನೆ. ಆಮೇಲೆ ಕೋಲಾರ ಜಿಲ್ಲೆಯಲ್ಲಿ ಯಾವ ವಿಶೇಷ ಕಾರ್ಯಕ್ರಮಗಳಡಿಯಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ಕೇಳಿದ್ದಾರೆ.

ಶ್ರೀ ವಿ. ಮುನಿಯಪ್ಪ:- ನ್ಯಾಚುರಲ್ ಕೆಲಾಮಿಟಿ ರಿಲೀಫ್ ಫಂಡ್‌ನಿಂದ ಎಷ್ಟು ಹಣ ಬಿಡುಗಡೆ ಮಾಡಿದೆ ಎಂದು ನಿರ್ದಿಷ್ಟವಾದ ಉತ್ತರ ಬೇಕು ಕೋಲಾರ ಜಿಲ್ಲೆ ಬಗ್ಗೆ. ಅದರಲ್ಲೂ ಕುಡಿಯುವ ನೀರಿನ ವ್ಯವಸ್ಥೆಗಾಗಿ ಎಷ್ಟು ಕೊಟ್ಟಿದ್ದೀರಿ?

ಶ್ರೀ ಆರ್.ಎಲ್. ಜಾಲಪ್ಪ: ಚರ್ಚೆ ಬಂದಾಗ ಆ ಡೀಟೆಲ್ಸ್ ಎಲ್ಲಾ ಕೊಡುತ್ತೇನೆ. ಕೋಲಾರಕ್ಕೆ ಸೀಆರ್ ಎಫ್‌ನಲ್ಲಿ ನಾವು ಹಣ ರಿಲೀಸ್ ಮಾಡಿರುವುದು 80 ಲಕ್ಷ. ಅದು ಕುಡಿಯುವ ನೀರು ಮತ್ತು ಇತರ ಕೆಲಸಗಳಿಗೋಸ್ಕರ. ಆರ್‌ಡಿಪಿಆರ್‌ನವರು 178 ಲಕ್ಷ ರೂಪಾಯಿಗಳನ್ನು ಕೋಲಾರ ಜಿಲ್ಲೆಗೆ ರಿಲೀಸ್ ಮಾಡಿದ್ದಾರೆ. ಈಗ ಅದನ್ನೇ ನಾವು ಹೇಳಿರುವುದು. ಕುಡಿಯುವ ನೀರಿನ ಪೂರೈಕೆಗಾಗಿ ಎರಡೂ ಕಡೆಯಿಂದ ಸೇರಿ 258 ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ ಕೋಲಾರ ಜಿಲ್ಲೆಗೆ. ಉದ್ಯೋಗ ಸೃಜನೆಗೆ 1392.67 ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ. ಮತ್ತು ಮೇವಿನ ಸರಬರಾಜಿಗೆ ಐದು ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ.

ಇನ್ನು ಮಿಕ್ಕಿದ್ದು ಎಷ್ಟೆಷ್ಟು ಕೆಲಸಗಳಾಗಿವೆ ಎನ್ನುವ ವಿವರಗಳು ನಮ್ಮ ಹತ್ತಿರ ಬಂದಿಲ್ಲ.

ಸಾರಿಗೆ ಇಲಾಖೆಯಲ್ಲಿ ಡೀಲಕ್ಸ್ ಬಸ್ಸುಗಳ ಕವಚ ನಿರ್ಮಾಣ ಕುರಿತು.

445- ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬಳ್ಳ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?